ಊ) ೧೦ ರೂಪಾಯಿಯವರೆಗೆ ಖರೀದಿಸುವ ಪದಾರ್ಥಗಳಿಗೆ ರಶೀದಿ ನೀಡಿಕೆ ಮನ್ನಾ ಮಾಡಲಾಗಿದೆ. (ಈ ಮಿತಿಯನ್ನು ೫೦ ರೂಪಾಯಿಗಳಿಗೆ ಹೆಚ್ಚಿಸಲು ಉದ್ದೇಶಿಸಿದೆ).

ಶ್ರೀ ವಂಶ್ಲಿಶಾರ್ಜುನ ವಿ. ಬನ್ನಿ.—ತೆರಿಗೆ ಪುನರ್ ಘಟನಾ ಸಮಿತಿ ಇದೆಯೆಂದು. ಈ ಸಮಿತಿಯು ಸದಸ್ಯರನ್ನು ಪುನರ್ ವಿಮರ್ಶೆ ಮಾಡಿ, ಇನ್ನೂ ಹೆಚ್ಚಿನ ನೇಮಕಾತಿಯನ್ನು ಮಾಡುತ್ತೀರಾ ? ನೋಂದಣಿ ಶುಲ್ಕ ೪೦ ಸಾವಿರದಿಂದ ೫೦ ಸಾವಿರಕ್ಕೆ ವೃದ್ಧಿ ಗೊಳಿಸಿದ್ದೀರಿ, ಇದನ್ನು ಈ ವರ್ಷದಿಂದ ೭೫ ಸಾವಿರಕ್ಕೆ ಮಾಡುವುದು ಇದಯೇ ? ಏಪ್ರಿಲ್ ೪೪ರಿಂದ ಈಗ ತೆರಿಗೆ ದರಗಳನ್ನು ಕಡಿಮೆ ಮಾಡುತ್ತೇವೆಂದು ಹೇಳಿದ್ದೀರಿ. ಇಂತಹ ಅನೇಕ ಐಟಂಗಳು ಏನಿವೆ, ಅವುಗಳನ್ನು ಏಪ್ರಿಲ್ ೪೪ರಿಂದ ಕಡಿಮೆ ಮಾಡುವ ಉದ್ದೇಶ ಏನಾದರೂ ಇದೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ಅಧ್ಯಕ್ಷರೆ, ಸಮಿತಿಯನ್ನು ಪುನರ್ ಘಟನೆ ಮಾಡುವುದನ್ನು ಪರಿಶೀಲನೆ ಮಾಡಿ, ಅದಷ್ಟು ಬೇಗ ಪುನರ್ ಘಟನೆ ಮಾಡುತ್ತೇವೆ. ಆ ಮೇಲೆ ಈಗಿರತಕ್ಕಂಥ ನೋಂದಾಣಿ ಶುಲ್ಕದ ಪರಿಮಿತಿಯನ್ನು ೪೦ ಸಾವಿರದಿಂದ ೫೦ ಸಾವಿರಕ್ಕೆ ಏರಿಸಿದ್ದೇವೆ. ಮತ್ತೆ ಇದನ್ನು ೭೫ ಸಾವಿರಕ್ಕೆ ಏರಿಸುವುದು ಸಾಧ್ಯವಿಲ್ಲ. ಈಗತಾನೆ ಇದನ್ನು ಪ್ರಕಟಣೆ ಮಾಡಿದ್ದೇನೆ. ಅದೇ ರೀತಿ ತೆರಿಗೆ ದರಗಳು ೧೯ ಇದ್ದುದನ್ನು ೧೦ಕ್ಕೆ ಇಳಿಸಿದ್ದೇವೆ. ಈ ಒಂದೇ ದರ ಇರುವಂತೆ ಮಾಡಬೇಕೆಂದು ಹೇಳುವುದಾದರೆ, ೯ ಪರ್ಸೆಂಟ್ ಹಾಕೋಣವೇ ೧೦ ಪರ್ಸೆಂಟ್ ಹಾಕೋಣವೆ ? ಆ ರೀತಿ ಹಾಕಬೇಕಾದರೆ, ನೀವು ಒಪ್ಪಿಕೊಳ್ಳುತ್ತೀರಾ ? ಇದು ಸಮ್ಮಿಶ್ರ ಉತ್ಪತ್ತಿ ಆಗುತ್ತದೆಯೇ ಅಥವಾ ಬೇರೆ ಕಡೆಯಿಂದ ಬರುತ್ತದೆಯೇ ಎಂಬುದನ್ನು ನೋಡಿ ಹಾಕಬೇಕಾಗುತ್ತದೆ. ಹೋದ ವರ್ಷ ಹೆಚ್ಚಿಗೆ ಇದ್ದುದನ್ನು ಕಡಿಮೆ ಮಾಡಿದ್ದೇವೆ. ಈ ವರ್ಷ ಇನ್ನೂ ಕಡಿಮೆ ಮಾಡಿದ್ದೇವೆ, ಬೇರೆ ಯಾವ ರಾಜ್ಯದಲ್ಲೂ ಕೂಡ ಹನ್ನೊಂದು ತರಹ ದರ ಇರುವುದು ಇಲ್ಲ. ನಾವು ಬಜೆಟ್ ಮಂಡನೆ ಮಾಡಿದ ಮೇಲೆ ನನಗೆ ವ್ಯಾಪಾರಸ್ಥರಿಂದ ಸಹಸ್ರಾರು ಸಂಖ್ಯೆಯಲ್ಲಿ ತಂತಿ ಸಂದೇಶಗಳು ಬಂದಿವೆ. ನೀವು ಉತ್ತಮ ಕೆಲಸ ಮಾಡಿದ್ದೀರಿ, ಕಮಗೆ ಅತಿ ದೊಡ್ಡ ಅನುಕೂಲವಾಗಿದೆ ಎಂದು ನಾವು ಮಾಡಿರುವುದನ್ನು ಶ್ಲಾಘನೆ ಮಾಡಿ ತಂತಿ ಕಳಿಸಿದ್ದಾರೆ. ಈಗ ಯಾವುದೇ ತರಹದ ರಿಯಾಯಿತಿ ಕೊಡುವುದಕ್ಕೆ ಸಾಧ್ಯವಿಲ್ಲ. ಇನ್ನು ದೈನಂದಿನ ವ್ಯವಹಾರದಲ್ಲಿ ವ್ಯಾಪಾರಸ್ಥರಿಗೆ ಏನಾ ತೊಂದರೆಯಾಗುತ್ತದೆ ಅದನ್ನು ಕಡಿಮೆ ಮಾಡುವುದಕ್ಕೆ ಕೆಲವಾರು ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ಕಂಪ್ಯೂಟರ್ ಸಿಸ್ಟಂ ಮಾಡುತ್ತಿದ್ದೇವೆ.

ಪ್ರಶ್ನೆ ೯೩೭

(ಮಾನ್ಯ ಸದಸ್ಯರು ಹಾಜರಿರಲಿಲ್ಲ.)

ಜಾಗೃತ ಆಯೋಗದ ವರದಿ.

೯೩೭ ಶ್ರೀ ಬಿ.ಜಿ. ಬಣಕಾರ್(ಹಿರೆಕೆರೂರು) ಮಾನ್ಯ ಮುಖ್ಯ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ.

ಅ) ೧೯೭೭-೭೮ ಮತ್ತು ೧೯೭೮-೭೯ನೇ ಸಾಲುಗಳಲ್ಲಿ ಕರ್ನಾಟಕ ಜಾಗೃತಾ ಆಯೋಗದ ವಾರ್ಷಿಕ ಆಡಳಿತ ವರದಿಗಳನ್ನು ಬಹಳ ತಡವಾಗಿ ೧೭-೧೧-೧೯೮೪ರ ಸುಮಾರಿಗೆ ವಿಧಾನಸಭೆಗೆ ಅರ್ಪಿಸಲು ಕಾರಣಗಳೇನು

ಆ) ೧೯೭೯-೮೦, ೧೯೮೧-೮೧, ೧೯೮೧-೮೨ ಮತ್ತು ೧೯೮೨-೮೩ ಈ ಸಾಲುಗಳ ಕರ್ನಾಟಕ ಜಾಗೃತಾ ಆಯೋಗದ ವಾರ್ಷಿಕ ಆಡಳಿತ ವರದಿಗಳನ್ನು ಪ್ರಕಟಣೆ ಮಾಡದಿರಲು ಹಾಗೂ ವಿಧಾನ ಸಭೆಗೆ ಅರ್ಪಿಸದಿರಲು ಕಾರಣಗಳೇನು

ಇ) ೧೯೭೭-೭೮ರಿಂದ ಇಲ್ಲಿಯವರೆಗೆ ಎಷ್ಟು ಜನ ಆರೋಪಿ ಸರ್ಕಾರಿ ನೌಕರರನ್ನು ನೌಕರಿಯಿಂದ ವಜಾ ಮಾಡಲು ಜಾಗೃತ ಆಯೋಗದವರು ಶಿಫಾರಸು ಮಾಡಿರುವರು

ಈ) ೧೯೭೭-೭೮ರಿಂದ ಇಲ್ಲಿಯವರೆಗೆ ಜಾಗೃತಾ ಆಯೋಗದವರು ಎಷ್ಟು ಮೊಕದ್ದಮೆಗಳ ಸಂಬಂಧದಲ್ಲಿ ಸೂಕ್ತ ಕ್ರಮಕ್ಕಾಗಿ ಶಿಫಾರಸು ಮಾಡಿದ್ದಾರೆ, ಹಾಗೂ ಅವುಗಳಲ್ಲಿ ಎಷ್ಟನ್ನು ಸರ್ಕಾರದವರು ತಿರುವು ಮುರುವು ಮಾಡಿರುವರು?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ಈ ಎರಡು ಸಾಲಿನ ವರದಿಗಳು ಜಾಗೃತ ಆಯೋಗದಿಂದ ಜುಲೈ ೧೯೭೬ ಮತ್ತು ಸೆಪ್ಟೆಂಬರ್ ೧೯೭೯ರಲ್ಲಿ ಸರ್ಕಾರಕ್ಕೆ ಬಂದಿದ್ದುವು ಆಯೋಗದ ಶಿಫಾರಸನ್ನು ಸರ್ಕಾರವು ಒಪ್ಪಿ ಕೊಳ್ಳದೆ ಇದ್ದ ಕೆಲವು ಪ್ರಕರಣಗಳು ಈ ವರದಿಗಳಲ್ಲಿ ಉಲ್ಲೇಖಿತವಾಗಿದ್ದುವು. ಅಂತಹ ಪ್ರಕರಣ ಗಳಲ್ಲಿ ಸಂಬಂಧಪಟ್ಟ ಇಲಾಖೆಗಳಿಂದ ವಿವರಗಳನ್ನು ತರಿಸಿ ವರದಿಗಳನ್ನು ಮುದ್ರಿಸಿ ಅವುಗಳ ಪ್ರತಿ ಗಳನ್ನು ೧೯೮೩ನೇ ಆಕ್ಟೋಬರ್ ತಿಂಗಳಲ್ಲಿ ವಿಧಾನ ಮಂಡಲಕ್ಕೆ ಕಳುಹಿಸಿಲಾಯಿತು. ಇಷ್ಟು ವಿಳಂಬಕ್ಕೆ ವಿವಿಧ ಇಲಾಖೆಗಳಿಂದ ವಿವರಗಳನ್ನು ಪಡೆಯುವುದರಲ್ಲಿ ಮತ್ತು ಸರ್ಕಾರಿ ಮುದ್ರಣಾಲಯ ದಲ್ಲಿ ವರದಿಗಳ ಮುದ್ರಣದಲ್ಲಿ ವಿಳಂಬವಾದುದೆ ಕಾರಣವಾಗಿದೆ.

ಆ) ೧೯೭೯-೮೦ನೇ ಸಾಲಿನ ವರದಿ ಇನ್ನೂ ಮುದ್ರಣದಲ್ಲಿರುವುದು. ೧೯೮೦-೮೧ರ ವರದಿ ತಯಾರಾಗಿರುವುದು, ಮತ್ತು ೧೯೭೯-೮೦ರ ಸಾಲಿನ ವರದಿಯ ಮುದ್ರಿತ ಪ್ರತಿಗಳಂ ದೊರೆತ ಕೂಡಲೆ ಇವೆರಡನ್ನು ವಿಧಾನ ಮಂಡಲಕ್ಕೆ ಕಳುಹಿಸಲಾಗುವುದು. ೧೯೮೧-೮೨ ಮತ್ತು ೧೯೮೨-೮೩ರ ಸಾಲಿನ ವರದಿಗಳನ್ನು ಆಯೋಗವು ಕಳುಹಿಸಿಕೊಟ್ಟಿರುವುದು ಇವುಗಳಲ್ಲಿ ಅವಶ್ಯವಾದ ವಿವರಗಳನ್ನು ಸಂಗ್ರಹಿಸಲಾಗಿದೆ ಮತ್ತು ಮುಂದಿನ ಕ್ರಮವನ್ನು ತ್ವರಿತ ಗೊಳಿಸಲಾಗುವುದು.

ಇ) ೧೦೩.

ಈ) ಆಯೋಗವು ೪೭೫ ಪ್ರಕರಣಗಳಲ್ಲಿ ಸೂಕ್ತ ಕ್ರಮವನ್ನು ಶಿಫಾರಸ್ಸು ಮಾಡಿತ್ತು ಮತ್ತು ಅವುಗಳಲ್ಲಿ ೩೦ ಪ್ರಕರಣಗಳಲ್ಲಿ ಸರ್ಕಾರವು ಆಯೋಗದ ಶಿಫಾರಸ್ಸನ್ನು ಒಪ್ಪಿಕೊಳ್ಳಲಿಲ್ಲ.

ಶ್ರೀ ಬಿ.ಜೆ. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಈಗ ವಿಜಿಲೆನ್ಸ್ ಕಮಿಷನರ್‌ರವರು ಆದಷ್ಟುಬೇಗ ತಮ್ಮ ವರದಿಯನ್ನು ತಯಾರಿಸಿ, ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದಾರೆ. ಸರ್ಕಾರದಲ್ಲಿ ಸಾಕಷ್ಟು ತಡ ಆಗಿದೆ. ಇದು ಉದ್ದೇಶಪೂರ್ವಕವಾಗಿ ತಡ ಆಗಿದೆಯೆಂದು ಕಂಡು ಬರುತ್ತದೆ. ಕಾರಣ ಕೂಡ ಇದೆ. ಹುಚ್ಚು ನಾಯಿ ಕಡಿದಿದ್ದಕ್ಕೆ ಔಷಧಿಗೆ ಹೋದಾಗ ಆಸ್ಪತ್ರೆಯಲ್ಲಿ ಇಪ್ಪತ್ತು ರೂಪಾಯಿ ಲಂಚ ತೆಗೆದು ಕೊಂಡರು ಎಂದು ವಿಜಿಲೆನ್ಸ್ ಕಮಿಷನರ್‌ರವರು ಸರ್ಕಾರಕ್ಕೆ ವರದಿಯನ್ನು ಕೊಟ್ಟಿರುತ್ತಾರೆ. ಸಂಬಂಧಪಟ್ಟ ಮಂತ್ರಿಗಳು, ತಾವೇ ಖುದ್ದಾಗಿ ರಿಪೋರ್ಟ್ ತರಿಸಿಕೊಂಡು, ಎನ್‌ಕ್ವೈರಿ ಮಾಡಿ ಸರಿಯಾಗಿದೆಯೆಂದು ಹೇಳಿ ಅವರ ವರದಿಯನ್ನು ರದ್ದು ಮಾಡಿದ್ದಾರೆ. ನನಗೆ ಇಂತಹ ೫-೬ ಪ್ರಕರಣ ಗಳು ಗಮನಕ್ಕೆ ಬಂದಿವೆ. ಈ ರೀತಿ ಆದರೆ ನಾವು ಯಾವ ರೀತಿ ಅಸೆಂಬ್ಲಿಯಲ್ಲಿ ಕೆಲಸ ಮಾಡಬೇಕು? ಇನ್ನು ಮುಂದಾದರೂ ವಿಧಾನಸಭಾ ಸದಸ್ಯರಿಗೆ ಆದಷ್ಟು ಜಾಗೃತ ರಿಪೋರ್ಟ್‌ನ್ನು ಕಳುಹಿಸಿಕೊಟ್ಟರೆ, ನಾವು ಸೂಕ್ತ ಸಲಹೆ ಕೊಡಲು ಅನುಕೂಲವಾಗುತ್ತದೆ. ಮುಖ್ಯವಾಗಿ ಪಕ್ಷಪಾತವಾಗಿ ರಾಜಕೀಯ ಪ್ರಭಾವದಿಂದ, ದುಷ್ಟ ಅಧಿಕಾರಿಗಳಿಗೆ ರಕ್ಷಣೆ ಕೊಡುವುದು ಕಂಡುಬಂದಿದೆ. ಇನ್ನು ಮುಂದೆ ಆದಷ್ಟುಜಾಗ್ರತೆ ರಿಪೋರ್ಟ್ ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ರಾಮಕೃಷ್ಣ ಹೆಗಡೆ.— ಮಾನ್ಯ ಅಧ್ಯಕ್ಷರೇ, ಒಂದು ಮಾತನ್ನು ನಾನು ಒಪ್ಪಿ ಕೊಳ್ಳುತ್ತೇನೆ. ಈ ವರದಿಯ ಬಗ್ಗೆ ಮುಂದಿನ ಕ್ರಮ ತೆಗೆದುಕೊಳ್ಳುವುದರಲ್ಲಿ ವಿಳಂಬವಾಗಿದೆ. ಉದಾಹರಣೆಗಾಗಿ ೭೭-೭೮ನೇ ಸಾಲಿನ ವರದಿ ವಿಜಿಲೆನ್ಸ್ ಕಮಿಷನರ್‌ರವರಿಂದ ೧೫-೭-೮೮ಕ್ಕೆ ಬಂತು. ಆಮೇಲೆ ೨೦-೫-೮೨ ಕ್ಕೆ ಅಂದರೆ ೧೯೮೨ನೇ ಇಸವಿಯಲ್ಲಿ ಕ್ಯಾಬಿನೆಟ್ ಮುಂದೆ ಇಡಲಾಯಿತು. ಮೂರು ತಿಂಗಳ ನಂತರ ಕ್ಯಾಬಿನೆಟ್ ತೀರ್ಮಾನವಾಯಿತು. ಸರ್ಕಾರದಿಂದ ಎರಡು ಮೂರು ದಿವಸದಲ್ಲಿ ಅನುಮೋದನೆ ಆಯಿತು. ನಂತರ ೨-೯-೮೨ರಲ್ಲಿ ಪೊಲೀಸ್‌ಗೆ ಕಳುಹಿಸಿದೆ. ಅಲ್ಲಿಂದ ೧೨-೧-೮೩ರಲ್ಲಿ ಬಂದಿದೆ. ಲೆಜಿಸ್ಲೇಚರ್ ಮುಂದೆ ೨೫-೧೦-೮೩ರಲ್ಲಿ ಇಟ್ಟದೆ. ಪೊಲೀಸ್‌ನಿಂದ ಬಂದ ಕೆಲವೇ ದಿವಸಗಳಲ್ಲಿ ಇಟ್ಟಿದ್ದೇವೆ. ೭೮-೭೯ನೇ ಸಾಲಿನ ವರದಿ ೧೫-೩-೮೦ರಲ್ಲಿ ಬಂತು. ೧೯-೧೨-೮೦ಕ್ಕೆ ಕ್ಯಾಬಿನೆಟ್ ಅಪ್ರೂವಲ್ ಆಯಿತು. ೨-೯-೮೨ಕ್ಕೆ ಪೊಲೀಸ್‌ಗೆ ಹೋಯಿತು. ೨೫-೯-೮೩ರಲ್ಲಿ ಲೆಜಿಸ್ಲೇಚರ್ ಮುಂದೆ ಇಟ್ಟದ್ದೇವೆ. ೧೯೭೯-೮೦ನೇ ಸಾಲಿನ ವರದಿ ೨೫-೧೦-೮೨ರಲ್ಲಿ ಬಂತು. ಕ್ಯಾಬಿನೆಟ್ ಮುಂದೆ ೨೮-೧೧-೮೨ಕ್ಕೆ ಹೋಯಿತು. ೪-೧೨-೮೩ರಲ್ಲಿ ಪೊಲೀಸ್‌ಗೆ ಕಳುಹಿಸಿದೆ. ಈವರೆಗೆ ಬಂದಿಲ್ಲ. ೧೯೮೦-೮೧ರ ವರದಿ ೨೧-೧೦-೮೨ರಲ್ಲಿ ಬಂತು. ೨೮-೧೧-೮೨ಕ್ಕೆ ಕ್ಯಾಬಿನೆಟ್ ಮುಂದೆ ಹೋಯಿತು. ೨೭-೯-೮೩ರಲ್ಲಿ ಪೊಲೀಸ್‌ಗೆ ಹೋದುದು ಈವರೆಗೆ ಬಂದಿಲ್ಲ. ೧೯೮೧-೮೨ನೇ ಸಾಲಿನ ವರದಿ ೨೬-೧೧-೮೩ಕ್ಕೆ ಬಂತು, ಇದರ ಬಗ್ಗೆ ಕೆಲವೊಂದು ವಿಶೇಷವಾದಂತಹ ಸ್ಪಷ್ಟೀಕರಣ ವನ್ನು ಕೇಳಿದ್ದೇವೆ. ಈವರೆಗೆ ವಿಜಿಲೆನ್ಸ್ ಕಮಿಷನರ್ ಅವರಿಂದ ಬಂದಿಲ್ಲ. ೧೯೮೨-೮೩ರ ವರದಿ

ಬಗ್ಗೆ ಪೂರ್ತಿ ಇನ್‌ಫರ್‌ಮೆಷನ್ ಕೇಳಿದ್ದೇವೆ, ಅದು ಬರಬಹುದು. ಮಾನ್ಯ ಅಧ್ಯಕ್ಷರೇ, ತಾನೆ ನನಗೆ ಬಂದ ಮಾಹಿತಿ ಪ್ರಕಾರ, ೧೯೭೯-೮೦, ೧೯೮೦-೮೧ ಈ ಎರಡು ವರ್ಷದ ಜರದಿಯಂನ್ನು ೫-೩-೮೪ಕ್ಕೆ ಸದನದ ಮುಂದೆ ಇಟ್ಟಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಕರ್ನಾಟಕ ಜಾಗೃತ ಆಯೋಗಕ್ಕೆ ಸಂಬಂಧಿಸಿದ ಐ.ಎ.ಎಸ್. ಐ.ಪಿ.ಎಸ್. ಅಧಿಕಾರಿಗಳು ತಪ್ಪು ಮಾಡಿದರೆ ಏನಾದರೂ ಕ್ರಮ ತೆಗೆದುಕೊಳ್ಳಲು ಅವಕಾಶ ಇದೆಯೇ?

ಶ್ರೀ ರಾಮಕೃಷ್ಣ ಹೆಗಡೆ.—ಈಗ ವಿಜಿಲೆನ್ಸ್ ಕಮೀಷನರ್‌ರವರ ಜ್ಯುರಿಸ್‌ಡಿಕ್ಷನ್ ಎಲ್ಲಾ ಅಧಿಕಾರಿಗಳ ಮೇಲೆ ಅಂದರೆ ಐ.ಎ.ಎಸ್, ಐ.ಪಿ.ಎಸ್, ಮತ್ತು ಕೆ.ಎ.ಎಸ್ ಅಧಿಕಾರಿಗಳ ಮೇಲೂ ಇದೆ. ಅವರು ಮಾಡಿರುವ ತಪ್ಪು ಯಾವುದೇ ಆಗಿರಲಿ, ಯಾವುದೇ ಭ್ರಷ್ಟಾಚಾರವೇ ಆಗಿರಲಿ ಇತರೇ ಅಧಿಕಾರಿಗಳ ಮೇಲೆ ಸರ್ಕಾರ ಏನು ನಿರ್ಣಯ ತೆಗೆದುಕೊಳ್ಳುತ್ತದೋ ಹಾಗೆಯೇ ಅವರ ಮೇಲೂ ನಿರ್ಣಯ ತೆಗೆದುಕೊಳ್ಳಬೇಕಾಗುತ್ತದೆ. ಆದರೆ ಐ.ಎ.ಎಸ್ ಮತ್ತು ಐ.ಪಿ.ಎಸ್ ಅಧಿಕಾರಿಗಳ ವಿಚಾರದಲ್ಲಿ ನಿರ್ಣಯ ತೆಗೆದುಕೊಳ್ಳಬೇಕಾದರೆ ಕೇಂದ್ರ ಸರ್ಕಾರದ ಅಪ್ರೂವಲ್ ಬೇಕಾಗುತ್ತದೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ತಾವು ೧೯೭೮ರಿಂದ ಹಿಡಿದು ೧೯೮೩-೮೪ರವರೆಗೆ ಅಂದರೆ ೪ ವರ್ಷದವರೆಗೆ ಅನೇಕ ವಿವಿಧ ಇಲಾಖೆಗಳಿಂದ ತಡವಾಗಿ ಬಂದಿರತಕ್ಕಂಥಾ ವರದಿಗಳನ್ನು ತಾವೇ ಒಪ್ಪಿಕೊಂಡಿದ್ದೀರಿ. ಈ ರೀತಿಯಾಗಿ ತಡವಾಗಿ ಕಳುಹಿಸಿರತಕ್ಕಂಥಾ ಅಧಿಕಾರಿಗಳ ಮೇಲೆ ಇದುವರೆಗೆ ಏನಾದರೂ ಕಾರ್ಯಕ್ರಮ ತೆಗೆದುಕೊಂಡಿದ್ದೀರಾ?

ಎರಡನೆಯದಾಗಿ ಇದರಲ್ಲಿ ೪೭೫ ಪ್ರಕರಣಗಳ ಪೈಕಿ ಜೊತೆಗೆ ೧೦೩ ಪ್ರಕರಣಗಳನ್ನು ಕಳಿದರೆ ಸುಮಾರು ೩೭೨ ಪ್ರಕರಣಗಳು ಇವೆ ಎಂದು ಗೊತ್ತಾಗುತ್ತದೆ. ಇದರಲ್ಲಿ ಕ್ಲಾಸ್ ಒಂದು, ಕ್ಲಾಸ್ ಎರಡು, ಕ್ಲಾಸ್ ಮೂರು, ಈ ರೀತಿ ಕ್ಲಾಸಿಫಿಕೇಷನ್ ಮಾಡಿದರೆ ಒಟ್ಟು ಎಷ್ಟು ಜನರಿದ್ದಾರೆ ಅನ್ನುವುದನ್ನು ಹೇಳಂತ್ತೀರಾ?

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಸದಸ್ಯರು ಕೇಳಿದ ೨ನೇ ಪ್ರಶ್ನೆಗೆ ಉತ್ತರ ಹೇಳಬೇಕಾದರೆ ಅದರ ಬಗ್ಗೆ ನೋಟೀಸ್ ಕೊಟ್ಟರೆ ವಿವರಣೆಯನ್ನು ಹೇಳುತ್ತೇನೆ ಈಗ ಹೇಳುವುದಕ್ಕೆ ಸಾಧ್ಯವಿಲ್ಲ.

ಮೊದಲನೇ ಪ್ರಶ್ನೆಗೆ ಉತ್ತರ ಹೇಳಬೇಕಾದರೆ ತಡವಾಗಿರುವುದಕ್ಕೆ ನಾವು ಯಾರ ಮೇಲೆ ಕ್ರಮ ತೆಗೆದುಕೊಳ್ಳಬೇಕಂ ಅನ್ನುವುದರ ಬಗ್ಗೆ ಕ್ಯಾಬಿನೆಟ್ ಡಿಸಿಷನ್ ತೆಗೆದುಕೊಳ್ಳಬೇಕಾಗುತ್ತದೆ.

ಜಮಖಂಡಿ ತಾಲ್ಲೂಕಿನ ಬನಹಟ್ಟಿ ದವಾಖಾನೆಯ ವೈದ್ಯಾಧಿಕಾರಿ ಹುದ್ದೆಯನ್ನು ಭರ್ತಿ ಮಾಡುವ ಬಗ್ಗೆ.

೯೫. ಜಿ. ಎಸ್. ಬಾಗಲಕೋಟೆ (ಜಮಖಂಡಿ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ ?

ಅ) ಜಮಖಂಡಿ ತಾಲ್ಲೂಕಿನ ಬನಹಟ್ಟಿ ಮತ್ತು ಸಾವಳಗಿ ದವಾಖಾನೆಯಲ್ಲಿ ಸ್ತ್ರೀ ವೈದ್ಯಾಧಿಕಾರಿಗಳ ಹುದ್ದೆ ಕಳೆದ ಅನೇಕ ವರ್ಷಗಳಿಂದ ಖಾಲಿಯಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಆ) ಆದರಿಂದ, ಆ ಭಾಗದ ಜನರಿಗೆ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ಸರ್ಕಾರದವರು ಆದ್ಷಿಗೆ ಕೂಡಲೇ ವೈದ್ಯಾಧಿಕಾರಿಗಳನ್ನು ನೇಮಿಸುವರೆ ?

ಶ್ರೀ ಪಿ. ಜಿ. ಆರ್.ಸಿಂಧ್ಯ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯಮಂತ್ರಿಗಳು):—

ಅ) ಬಂದಿದೆ.

ಆ) ಹೌದು.

ಇ) ನೇಮಿಸಲಾಗುವುದು.